**ದಿನಾಂಕಃ 26/07/2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – ಅರ್ಜಿದಾರರ ಪರ ಶ್ರೀ. ಎಸ್ ಆರ್ ಎಸ್ ವಕೀಲರಿಂದ–**

ನನ್ನ ಗುಡ್ಸು ವಾಹನದ ಸಂಖ್ಯೆ ಕೆ.ಎ–28, ಬಿ–1682 ಇರುತ್ತದೆ. ಸದರಿ ನನ್ನ ಗುಡ್ಸು ವಾಹನದ ಆ ದಿನ ತಾಳಿಕೋಟಿಯ ಮುಕಿಹಾಳ ದರ್ಗಾಕ್ಕೆ ಜವಳದ ಕಾರ್ಯಕ್ರಮಕ್ಕೆ ಹೋಗಿತ್ತು ನಮ್ಮ ಸಂಬಂಧಿಕರಾದ ತುಂಬರಿಯವರ ಜವಳ ಕಾರ್ಯಕ್ರಮಕ್ಕೆ ಹೋಗಿತ್ತು . ಅವರ ಹೆಸರು ಕಾಸಪ್ಪ ತುಂಬಗಿ ಇರುತ್ತದೆ. ಅಪಘಾತವು ರಾತ್ರಿ 9–30 ಗಂಟೆಗೆ ಆಗಿರುತ್ತದೆ. ಅಪಘತವಾದ ನಂತರ ಪೊಲೀಸರು ಎಫ್ ಐ ಆರ್ ಮಾಡಿ ದೋಷರೋಪಣ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಒಂದು ದಿನ ತಡಮಾಡಿ ಮಾಡಿ ಎಫ್ ಐ ಆರ್ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಪೊಲೀಸರು ನನ್ನ ವಾಹನದ ಚಾಲಕ ಅತೀ ಜೋರಾಗಿ ವಾಹನವನ್ನು ಚಲಾಯಿಸಿ ರಸ್ತೆ ಪಕ್ಕದಲ್ಲಿ ನಿಂತ ಟ್ರಾಕ್ಟಗೆ ಹಾಯಿಸಿ ಅಪಘಾತ ಪಡಿಸಿರುತ್ತಾರೆ ಅಂತಾ ಹೇಳಿ ದೋಷರೋಪಣ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಸುಳ್ಳು ದೋಷರೋಪಣ ಪಟ್ಟಿ ಸಲ್ಲಿಸಿರುತ್ತಾರೆ ಅಂತಾ ನುಡಿಯುತ್ತಾನೆ. ಅಪಘಾತವಾದ ದಿನವೇ ನನಗೆ ಸುಳ್ಳು ದೋಷರೋಪಣ ಪಟ್ಟಿ ಸಲ್ಲಿಸಿರುತ್ತಾರೆ ಅಂತಾ ನನಗೆ ಗೊತ್ತಾಗಿರುತ್ತದೆ.

2. ಪೊಲೀಸರು ಸುಳ್ಳು ದೋಷರೋಪಣ ಪಟ್ಟಿ ಸಲ್ಲಿಸಿರುತ್ತಾರೆ ಅಂತಾ ಹೇಳಿ ಸಂಬಂಧಪಟ್ಟ ನ್ಯಾಯಾಲಯದಲ್ಲಿ ಸದರಿ ದೋಷರೋಪಣ ಪಟ್ಟಿ ಪ್ರಶ್ನಿಸಿರುತ್ತೇನೆ. ಮುದ್ದೇಬಿಹಾಳ ಹಿರಿಯ ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತೇನೆ. ಮುದ್ದೇಬಿಹಾಳ ಹಿರಿಯ ನ್ಯಾಯಾಲಯದಲ್ಲಿ ದೋಷರೋಪಣ ಪಟ್ಟಿ ಪ್ರಶ್ನಿಸಿದ ಬಗ್ಗೆ ದಾಖಲಾತಿಯನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಈ ನ್ಯಾಯಾಲಯದಲ್ಲಿ ಹೊರತುಪಡಿಸಿ ನಾನು ಬೇರೆ ಯಾವುದೇ ನ್ಯಾಯಾಲಯದಲ್ಲಿ ದೋಷರೋಪಣ ಪಟ್ಟಿ ಪ್ರಶ್ನಿಸಿರವುದಿಲ್ಲ ಎಂದರೆ ಸರಿ.

3. ಅಪಘಾತವಾದ ದಿನ ನಾನು ಘಟನ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದ ನಾನು ಕರ್ತವ್ಯದ ಮೇಲೆ ಇದ್ದ ಕಾರಣ ನಾನು ಮಾರನೆ ದಿನ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ ಎಂದು ನುಡಿದಿರುತ್ತಾರೆ. ಅಪಘಾತವಾದ ನಂತರ ನಮ್ಮ ವಾಹನ ಹೊಳ್ ಮಗ್ಗಲಾಗಿ ಬಿದ್ದಿದ್ದು ಎಂದರೆ ಸರಿಯಲ್ಲ. ಸದರಿ ನಮ್ಮ ವಾಹನ ರಸ್ತೆ ಪಕ್ಕದಲ್ಲಿ ನಿಂತ ಮಲ್ಲಯ್ಯನ ಮೇಲೆ ಬಿದ್ದ ಕಾರಣ ಆತ ಸ್ಥಳದಲ್ಲಿ ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ಟ್ರ್ಯಾಕ್ಟರ್ ಚಾಲಕ ಮಲ್ಲಯ್ಯಗೆ ಅಪಘಾತ ಪಡಿಸಿದ ಕಾರಣ ಆತ ಮೃತಪಟ್ಟಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ವಿಷಯವನ್ನು ನಮ್ಮ ವಾಹನ ಚಾಲಕಾ ಮತ್ತು ನಮ್ಮ ವಾಹನದಲ್ಲಿ ಇದ್ದ ಜನ ನನಗೆ ಹೇಳಿರುತ್ತಾರೆ. ಟ್ರ್ಯಾಕ್ಟರ್ ಚಾಲಕ ಮಲ್ಲಯ್ಯಗೆ

ಅಪಘಾತ ಪಡಿಸಿದ ಕಾರಣ ಆತ ಮೃತಪಟ್ಟಿರುತ್ತಾನೆ ಎಂದು ನಮ್ಮ ವಾಹನ ಚಾಲಕಾ ಮತ್ತು ನಮ್ಮ ವಾಹನದಲ್ಲಿ ಇದ್ದ ಜನ ಪೊಲೀಸರ ಮುಂದೆ ಹೇಳಿ ನೀಡಿರುತ್ತಾರೆ. ಸದರಿ ಹೇಳಿಕೆಗಳನ್ನು ನ್ಯಾಯಾಲಯದ ಮುಂದು ಹಾಜರುಪಡಿಸಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಸದರಿ ಹೇಳಿಕೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುತ್ತೇನೆ. ಟ್ರಾಕ್ಟರ್ ಚಾಲಕ ಮಲ್ಲಯ್ಯಗೆ ಅಪಘಾತ ಪಡಿಸಿದ ಕಾರಣ ಆತ ಮೃತಪಟ್ಟಿರುತ್ತಾನೆ ಎಂದು ನಮ್ಮ ವಾಹನ ಚಾಲಕಾ ಮತ್ತು ನಮ್ಮ ವಾಹನದಲ್ಲಿ ಇದ್ದ ಜನ ಪೊಲೀಸರ ಮುಂದೆ ಹೇಳಿ ನೀಡಿರುತ್ತಾರೆ. ಸದರಿ ಹೇಳಿಕೆಗಳನ್ನು ನೀಡಿರುತ್ತಾರೆ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ವಾಹನದ ಚಾಲಕ ಕುಡಿದು ವಾಹನವನ್ನು ಚಲಾಯಿಸಿ ರಸ್ತೆ ಪಕ್ಕದಲ್ಲಿ ನಿಂತ ಟ್ರಾಕ್ಟರ್ ಗೆ ಅಪಘಾತಪಡಿಸಿ ರಸ್ತೆ ಪಕ್ಕದಲ್ಲಿ ನಿಂತ ಮಲ್ಲಯ್ಯನ ಮೇಲೆ ಹಾಯಿಸಿ ಕಾರಣ ಸ್ಥಳದಲ್ಲಿಯೇ ಮೃತಪಡುತ್ತಾನೆ ಎಂದರೆ ಸರಿಯಲ್ಲ. ನಮ್ಮ ವಾಹನದ ಚಾಲಕ ಸದರಿ ಅಪಘಾತದ ವಿಷಯ ಪೊಲೀಸರಿಗೆ ತಿಳಿಸಿದ ವಾಹವನ್ನು ಅಲ್ಲೇ ಬಿಟ್ಟು ಓಡಿ ಹೋಗಿರುತ್ತಾನೆ ಎಂದರೆ ಸರಿಯಲ್ಲ.

4. ಮೃತ ಮಲ್ಲಯ್ಯ ಗುಡಿಯ ಪೂಜಾರಿ ಕೆಲಸ ಮಾಡುತ್ತಿದ್ದನು. ಮಲ್ಲಯ್ಯ ನನಗೆ ಪರಿಚಯ ಇರುವುದಿಲ್ಲ. ಮಲ್ಲಯ್ಯ ಲೈಟ್ ಮೋಟರ ವಾಹನಗಳ ಚಾಲಕನಾಗಿದ್ದ ಎಂದರೆ ಸರಿಯಲ್ಲ. ಮಲ್ಲಯ್ಯನ ಹತ್ತಿರ ಚಾಲನಾ ಪರವಾಣಿಗೆ

ಪತ್ರ ಇತ್ತು ಎಂದರೆ ಸರಿಯಲ್ಲ  ಸಾಕ್ಷಿಗೆ ಮೃತ ಮಲ್ಲಯ್ಯನ ಚಾಲನಾ ಪರವಾಣಿಗೆ ಪತ್ರವನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರಿತಿಸಿರುವುದರಿಂದ ಸದರಿ ದಾಖಲಾತಿಯನ್ನು ನಿಪಿ–10 ಎಂದು ಗುರುತಿಸಲಾಯಿತು .  ವಾಹನ ಚಾಲನೆಯಿಂದ  ಮೃತ ಮಲ್ಲಯ್ಯನ ತಿಂಗಳಿಗೆ 20 ಸಾವಿರ ಆದಾಯ ಪಡೆಯುತ್ತಿದ್ದ ಎಂದರೆ ಸರಿಯಲ್ಲ.

5. ಮಲ್ಲಯ್ಯನಿಗೆ ಎಷ್ಟು ಜನ ಮಕ್ಕಳು ಇರುತ್ತಾರೆ ಅಂತಾ ನನಗೆ ಗೊತ್ತಿಲ್ಲ. ಮಲ್ಲಯ್ಯನಿಗೆ 3 ಜನ ಮಕ್ಕಳು, ತಾಯಿ ಮತ್ತು ಹೆಂಡತಿ ಇರುತ್ತಾರೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಸದರಿ 5 ನೇ ಅರ್ಜಿದಾರಳಿಗೆ ಮಲ್ಲಯ್ಯ ಎಂಬ ಮಗ ಹೊರತುಪಡಿಸಿ ಬೇರೆ ಯಾರು ಗಂಡು ಮಕ್ಕಳು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತವು ನನ್ನ ವಾಹನ ತಪ್ಪಿನಿಂದ ಆದ ಕಾರಣ ಮತ್ತು ಸದರಿ ವಾಹನ ಮಾಲಕನು ಆದ ಕಾರಣ ಅರ್ಜಿದಾರಿರಿಗೆ ಪರಿಹಾರದ ಹಣ ಕೊಡಲು ಭಾಧ್ಯಸ್ಥನಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಪರಿಹಾರದ ಹಣವನ್ನು ಟ್ರಾಕ್ಟರ ಮಾಲಿಕನು ಕೊಡಬೇಕಾಗುತ್ತದೆ ಎಂದು ನುಡಿದಿರುತ್ತಾರೆ.

6. ಸದರಿ ಅಪಘಾತವು  ಟ್ರಾಕ್ಟರ್ ಚಾಲಕ ತಪ್ಪಿನಿಂದ ಆಗಿರುತ್ತದೆ ಎಂದು ತೋರಿಸಲು ನಾನು ನ್ಯಾಯಾಲಯದ ಮುಂದೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಯಾವುದೇ ದಾಖಲಾತಿ

ಹಾಜರಪಡಿಸದೇ ಟ್ರ್ಯಾಕ್ಟರ್ ಚಾಲಕ ತಪ್ಪಿನಿಂದ ಅಪಘಾತವಾಗಿರುತ್ತದೆ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರದ ಹಣ ಕೊಡುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಟ್ರ್ಯಾಕ್ಟರ್ ಚಾಲಕ ತಪ್ಪಿನಿಂದ ಅಪಘಾತವಾಗಿರುತ್ತದೆ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ನನ್ನ ಮದುವೆಯಾಗಿರುತ್ತದೆ. ನನಗೆ 3 ಜನ ಮಕ್ಕಳ ಇರುತ್ತಾರೆ. ನಾನು ಹುಬ್ಬಳ್ಳಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸಮಾಡುತ್ತಿದ್ದೇನೆ. ನನ್ನ ಅಣ್ಣ ಲವಪ್ಪ ಮತ್ತು ಆತನ ಹೆಂಡತಿ ಮತ್ತು ಮಕ್ಕಳು ತಿಳುವುಳು ಗ್ರಾಮದಲ್ಲಿ ವಾಸಮಾಡಿತ್ತಿದ್ದಾರೆ. ಲವಪ್ಪ ಕೂಲಿ ಕೆಲಸ ಮಾಡುತ್ತಾ ತನ್ನ ಹೆಂಡತಿ ಮತ್ತು ಮಕ್ಕಳೊಂದಿಗೆ ವಾಸ ಮಾಡುತ್ತಿದ್ದಾರೆ. ನನ್ನ ಅಣ್ಣ ಪ್ರತ್ಯಕವಾಗಿ ವಾಸ ಮಾಡುತ್ತಿರುವ ಕಾರಣ ಆತನ ಕುಟುಂಬವನ್ನು ನಾನು ನೋಡಿಕೊಳ್ಳವ ಪ್ರಶ್ನೆಯೇ ಬರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರಿಗೆ ಪರಿಹಾರದ ಹಣ ಕೊಡುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ನಮ್ಮ ಅಣ್ಣನ ಕುಟುಂಬದ ಜವ್ದಾರಿಯನ್ನು ನಾನೇ ನಿರ್ವಹಿಸುತ್ತಿದ್ದೇನೆ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8. ಮಲ್ಲಯ್ಯ ಮೃತಪಟ್ಟಾಗ ಆತನ ಶವ ಸಂಸ್ಕಾರಕ್ಕೆ ಮತ್ತು ಆತನ ಶವ ಸಾಗಾಟಕ್ಕೆ ಎಷ್ಟು ಹಣ ಖರ್ಚಾಗಿರುತ್ತದೆ ಅಂತಾ ನನಗೆ ಗೊತ್ತಿಲ್ಲ. ಅರ್ಜಿದಾರರು ನನ್ನ ವಿರುದ್ಧ ಎಷ್ಟು ಪರಿಹಾರದ ಹಣ ಕೇಳಿರುತ್ತಾರೆ ಅಂತಾ ನನಗೆ ಗೊತ್ತಿಲ್ಲ. ಅರ್ಜಿದಾರರು ನನ್ನ ವಿರುದ್ಧ 30 ಲಕ್ಷ ರೂಪಾಯಿ ಪರಿಹಾರದ ಹಣ ಕೇಳಿರುತ್ತಾರೆ. ಅರ್ಜಿದಾರರು ಅರ್ಜಿಯಲ್ಲಿ ಬರೆದ ಉಳಿದ ವಿಷಯಗಳು ನನಗೆ ಗೊತ್ತಿಲ್ಲ. ಸದರಿ ಅಪಘಾತವು ನನ್ನ ವಾಹನ ಚಾಲಕನ ತಪ್ಪಿನಿಂದಾದ ಕಾರಣ ನಾನೇ ಅರ್ಜಿದಾರಿಗೆ ಪರಿಹಾರದ ಹಣ ಕೊಡಲು ಭಾಧ್ಯಸ್ಥನಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರಿಗೆ ಪರಿಹಾರದ ಹಣ ಕೊಡುವುದನ್ನು ತಪ್ಪಿಸಲು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ನನ್ನ ಸಮಕ್ಷಮ,

ಓ.ಹೇ.ಕೇ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಮುದ್ದೇಬಿಹಾಳ